ಶ್ರೀ ಟಿ.ಎಂ. ಮಂಜುನಾಥ್.—ಈ ಹ್ಯಾಂಡ್‌ಲೂಮ್‌ನಿಂದ ತಯಾರಿಸಿದಂತ ಬಟ್ಟೆಯ ಬಗ್ಗೆ ದೂರುಗಳು ಬರುತ್ತಿವೆ. ಹ್ಯಾಂಡ್‌ಲೂಮ್ ಬಟ್ಟೆಯ ಸೇಲ್ಸ್ ಆಕ್ಟ್‌ಯಿಂದ ಹಾಕುವ ಬಗ್ಗೆ ನೆರೆ ರಾಜ್ಯಗಳಲ್ಲಿ ಏನಾಗಿದೆ ಎಂದರೆ ಕೊ-ಆಪರೇಟಿವ್ ಸೊಸೈಟಿಗೆ ಸಂಬಂಧಪಟ್ಟ ಸೆಕ್ರಟರಿಯವರಿಂದ ಪಡೆದ ಸರ್ಟಿಫಿಕೇಟ್ ಕೊಟ್ಟರೆ ಆಕ್ಟ್‌ಯಿಂದ ಮಾಫಿ ಮಾಡುತ್ತಾರೆ ಅದರಂತೆ ನಮ್ಮ ರಾಜ್ಯದಲ್ಲಿಯೂ ಈ ಆಕ್ಟ್‌ಯನ್ನು ತೆಗೆದುಕೊಳ್ಳಬೇಕು ಇರುವಂತೆ ಆದೇಶವನ್ನು ಕೊಡುತ್ತೀರಾ.

ಶ್ರೀ ಡಿ. ಕೆ. ನಾಯ್ಕರ್.—ಈಗಾಗಲೇ ಈ ಬಗ್ಗೆ ಸವಿಸ್ತಾರವಾಗಿ ವಿಚಾರ ಮಾಡಿ ಇಂಡಸ್ಟ್ರೀಸ್ ಡಿಪಾರ್ಟ್‌ಮೆಂಟನವರೊಡನೆ ಚರ್ಚೆ ಮಾಡಿ ಒಂದು ಸರ್ಕ್ಯುಲರ್ ಅನ್ನು ಇಷ್ಯೂ ಮಾಡಿದ್ದೇವೆ.

ಶ್ರೀ ಟಿ. ಎಂ. ಮಂಜುನಾಥ್.—ಆ ಸರ್ಕ್ಯುಲರ್ ಅನ್ನು ನಾನು ಓದಿದ್ದೇನೆ. ಇದರಲ್ಲಿ ಚೀಫ್ ಆಫೀಸರ್‌ಗಳು ಏನಿದ್ದಾರೆ ಅವರು ಇದನ್ನು ದುರುಪಯೋಗಪಡಿಸಿಕೊಂಡಿದ್ದಾರೆ. ಅದರಿಂದ ಹ್ಯಾಂಡ್‌ಲೂಮ್ ವೀವರ್ಸ್‌ಗೆ ತೊಂದರೆಯಾಗಿದೆ ಅವರು ತೆರಿಗೆಯನ್ನು ಕೊಡುತ್ತಾರೆಂದು ಕಳ್ಳತನದಲ್ಲಿ ಹಣವನ್ನು ಗಳಿಸುತ್ತಾರೆ ಈ ರೀತಿ ಹಣ ಸೋರಿಹೋಗುತ್ತದೆ ಆದ್ದರಿಂದ ಇದನ್ನು ಕೂಡಲೇ ಮಾಫಿ ಮಾಡುವಂತೆ ಒಂದು ಸುಲಲಿತವಾದ ಆದೇಶವನ್ನು ಕೊಡಬೇಕು.

ಶ್ರೀ ಡಿ. ಕೆ ನಾಯ್ಕರ್.—ಯಾವ ಚೀಫ್ ಆಫೀಸರ್ ಆಗಲೀ ಇದನ್ನು ದುರುಪಯೋಗ ಮಾಡುತ್ತಾರೆಂದು ನಿರ್ದಿಷ್ಟವಾಗಿ ನನ್ನ ಗಮನಕ್ಕೆ ತಂದುಕೊಟ್ಟಾಗ ಅವರ ಮೇಲೆ ಕ್ರಮವನ್ನು ಕೈಕೊಳ್ಳುತ್ತೇನೆ.

ಶ್ರೀ ಬಿ. ಬೈರಪ್ಪಾಜಿ.—ಸ್ವಾಮಿ ಅನೇಕ ಉಪಯುಕ್ತ ಶಿಫಾರಸ್ಸುಗಳನ್ನು ಕಾರ್ಯರೂಪಕ್ಕೆ ತರತಕ್ಕಂಥ ದಿಶೆಯಲ್ಲಿ ಅವುಗಳನ್ನು ಕಾರ್ಯರೂಪಕ್ಕೆ ತರಲು ಎಷ್ಟು ಕಾಲ ಬೇಕಾಗುತ್ತದೆ.

ಶ್ರೀ ಡಿ. ಕೆ. ನಾಯ್ಕರ್.—ಇಂತಿಷ್ಟು ಕಾಲ ಬೇಕು ಎಂದು ನಿರ್ದಿಷ್ಟವಾಗಿ ಹೇಳುವುದಕ್ಕಾಗುವುದಿಲ್ಲ. ಆದಷ್ಟು ತೀವ್ರವಾಗಿ ಸರ್ಕಾರ ಪರಿಶೀಲನೆ ಮಾಡಿ ಶಿಫಾರಸ್ಸುಗಳನ್ನು ಜಾರಿಗೆ ತರತಕ್ಕ ಪ್ರಯತ್ನ ಮಾಡುತ್ತೇವೆ.

1-30 P.M.

Clousure of Shankara Textiles Mill, Davanagere

277. SRI M. S. KRISHNAN (Malleswaram)—Will the Minister for Labour be pleased to state.—

(*a*) whether the the Government is aware that the Shankara Textile Mills, Davanagere has been closed down virtually since the last one year ;

(*b*) whether the employer has not remitted the provident fund, E.S.I., and gratuity dues of the employees to the concerned authorities ;

(*c*) whether the employer has misused these funds ;

(*d*) the action the Government has taken or intending to take against the employer of Shankara Textile Mills ;

(*e*) the action the Government has taken or propose to take to get the mills reopened and provide jobs to all the 800 and odd workers ?

SRI C. N. PATIL (Minister for Labour).—

(*a*) Yes.

(*b*) Yes. in respect of provident fund and ESI

(*c*) Yes.

(*d*) Action to prosecute the management has already been intiated.

(*e*) The National Industrial Committee on Textile is seized of the matter.

ಶ್ರೀ ಎಂ. ಎಸ್. ಕೃಷ್ಣನ್.—ಸ್ವಾಮಿ, ತಾವು ಈ ವಿಷಯ ಹತ್ತಿ ಗಿರಣಿಗಳ ರಾಷ್ಟ್ರೀಯ ಕೈಗಾರಿಕಾ ಸಮಿತಿಯ ಪರಿಶೀಲನೆಯಲ್ಲಿದೆ ಎಂದು ಹೇಳಿದ್ದೀರಿ. ಅವರು ಏನು ಪರಿಶೀಲನೆ ಮಾಡಿದ್ದಾರೆ ? ಅವರೇನಾದರೂ ವರದಿ ಕಳುಹಿಸಿದ್ದಾರೆಯೇ ಅಥವಾ ಶಿಫಾರಸ್ಸುಗಳೇನಾದರೂ ಬಂದಿವೆಯೇ ?

ಶ್ರೀ ಸಿ. ಎನ್. ಪಾಟೀಲ್.—ಕೇಂದ್ರದಲ್ಲಿ ಹೊಸ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಯಾವ ಸಿಕ್ ಮಿಲ್‌ಗಳನ್ನೂ ಸರ್ಕಾರದ ವಶಕ್ಕೆ ತೆಗೆದುಕೊಳ್ಳಬಾರದೆಂದು ಕೇಂದ್ರದ ಮಂತ್ರಿಗಳು ಹೇಳಿದ್ದಾರೆ. ಅದು ನಮ್ಮ ಗಮನಕ್ಕೆ ಬಂದಿದೆ.

ಶ್ರೀ ಎಂ. ಎಸ್. ಕೃಷ್ಣನ್.—ಸ್ವಾಮಿ, ಶಂಕರ ಚೆಕ್ಸ್‌ಟೈಲ್ಸ್ ಮಿಲ್ಲಿನಲ್ಲಿ ತಮಗೆ ಗೊತ್ತಿರುವ ಹಾಗೆ ಸುಮಾರು 9 ಲಕ್ಷ ರೂಪಾಯಿಗಳ ದುರ್ವ್ಯವಹಾರ ಆಗಿದೆ. ಅದನ್ನು ಕವರ್‌ಮಾಡಿ 36 ಲಕ್ಷ ರೂಪಾಯಿನಷ್ಟು ಗ್ಯಾರಂಟಿಯನ್ನು ಸರ್ಕಾರದವರು ಕೊಡುವ ಹಾಗಿದ್ದರೆ ಬ್ಯಾಂಕಿನಿಂದ ಸಾಲ ಪಡೆದು ಬೇರೆಯವರು ಅದನ್ನು ನಡೆಸುವುದಕ್ಕೆ ಸಾಧ್ಯವಾಗುತ್ತದೆ ಆ ರೀತಿ ಕಾರ್ಯಕ್ರಮ ಕೈಗೊಂಡು ಬೇರೆ ಪಾರ್ಟಿಯವರಿಗೆ ಆ ಮಿಲ್ಲನ್ನು ನಡೆಸುವುದಕ್ಕೆ ಕೊಡುತ್ತೀರಾ ಅಥವಾ ತಾವೇ ಜವಾಬ್ದಾರಿ ತೆಗೆದುಕೊಂಡು ಏನಾದರೂ ಮಾಡುತ್ತೀರಾ ?

ಶ್ರೀ ಸಿ. ಎನ್. ಪಾಟೀಲ್—ಇಂಡಸ್ಟ್ರೀಸ್ ಡಿಪಾರ್ಟ್‌ಮೆಂಟಿನೊಂದಿಗೆ ಈ ಬಗ್ಗೆ ವ್ಯವಹಾರ ಮಾಡಿದ್ದೇವೆ. ಶಂಕರ ಚೆಕ್ಸ್‌ಟೈಲ್ಸ್ ಮಿಲ್ಲನ್ನು ನಡೆಸುವುದಕ್ಕೆ ವಹಿಸಿಕೊಂಡಲ್ಲಿ 36 ಲಕ್ಷ ರೂಪಾಯಿನಷ್ಟು ಗ್ಯಾರಂಟಿ ಏನು ಕೊಡಬೇಕಾಗುತ್ತದೋ ಅದನ್ನು ಕೊಟ್ಟು ನಡೆಸಲು ಇಂಡಸ್ಟ್ರೀಸ್ ಡಿಪಾರ್ಟ್‌ಮೆಂಟಿನೊಡನೆ ವ್ಯವಹಾರ ಮಾಡಿದ್ದೇವೆ. ಅಂತಿಮವಾಗಿ ನಿರ್ಣಯ ಏನೂ ಕೈಗೊಂಡಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—9 ಲಕ್ಷ ರೂಪಾಯಿಗಳನ್ನು ಕವರ್ ಮಾಡುವುದಕ್ಕೆ ಏನು ಕಾರ್ಯಕ್ರಮತೆಗೆದುಕೊಂಡಿದ್ದೀರಾ ? ಫೈನಾನ್ಷಿಯರ್ ಇನ್‌ಸ್ಟಿಟ್ಯೂಷನ್‌ನಿಂದ ಲೋನ್ ಏನಾದರೂ ತೆಗೆದುಕೊಂಡು ಕವರ್ ಮಾಡುವುದಕ್ಕೆ ಪ್ರಯತ್ನಮಾಡಿದ್ದೀರೋ ಹೇಗೆ?

ಶ್ರೀ ಸಿ. ಎನ್. ಪಾಟೀಲ್.—ಅದರಲ್ಲಿ ಲೇಬರ್ ಡಿಪಾರ್ಟ್‌ಮೆಂಟ್ ಇನ್‌ವಾರ್ವ್ ಆಗುವುದಕ್ಕೆ ಬರುವುದಿಲ್ಲ. Only the Industries Department can take up such measures. I have requested the Department of Industries and Commerce to look into the matter.

ಶ್ರೀ ಎಂ ಎಸ್. ಕೃಷ್ಣನ್.—ಸುಮಾರು ಒಂದೂವರೆ ವರ್ಷದಿಂದ 80 ಸಂಸಾರಗಳು ಬೀದಿ ಪಾಲಾಗಿದೆ. ನಮ್ಮ ಇರಾಖೆಯೆ ಬೇರೆ ಆ ಇಲಾಖೆಯೆ ಬೇರೆ ಬೇರೆ ನಮಗೆ ಸಂಬಂಧಪಟ್ಟಿಲ್ಲ ಎಂದುಕುಳಿತುಕೊಂಡರೆಹೇಗೆ ! ಎಲ್ಲಾ ವಿಧಾನಸೌಧದಲ್ಲೇ ಇರುವುದು. ಇಷ್ಟು ದಿನಗಳಾದರೂ ಆ ಬಗ್ಗೆ ಏನಾದರೊಂದು ಇತ್ಯರ್ಥ ಮಾಡದೇ ಇರುವುದು ನ್ಯಾಯವೇ :

SRI C.N. PATIL.—As for as the Legislative Assembly is concerned I have to give such replies. If the question is put directly to the Industries Department some positive reply may come out.